ಹೆಂಡತಿಯಿದ್ದಾಳೆ, ನಾನ್ಯಾಕೆ ಈ ರೀತಿ ಯೋಚಿಸಿದೆ, ಒಂದು ವೇಳೆ ಪ್ರಿಯಕಾರಿಣಿ ಬೇಕನ್ನಿಸಿದರೂ ಈಗ ಹೇಗೆ ಸಿಗೋಕೆ ಸಾಧ್ಯ. ಇಷ್ಟು ವರ್ಷ ಒಂದಿನಿತೂ ಅವಳ ನೆನಪು ಬರದ ನಂಗೆ ರಾತ್ರಿ ಏಕಾಏಕಿ ಅವಳ ಕನಸು ಬಿದ್ದ ಮಾತ್ರಕ್ಕೆ ಅವಳು ಬೇಕು ಅಂತ ಅನ್ನಿಸಿದರೆ ಸಿಕ್ಕುತ್ತಾಳಾ ಅವಳು. ಇದೆಂತ ಹುಚ್ಚಾಟ ಅಂತನ್ನಿಸಿ ತನ್ನ ಬಗ್ಗೆಯೇ ಒಮ್ಮೆ ಬೇಸರವಾಯ್ತು. ಆದರೂ ಅವಳ ಹಳೆಯ ನೋಟಗಳೆಲ್ಲಾ ಚೂರು ಚೂರು ನೆನಪು ಮಾಡಿಕೊಳ್ಳುತ್ತ ನಡೆಯತೊಡಗಿದ.

ಅವನ ಸವಾರಿ ಕೋಟಿ ಚೆನ್ನಯ್ಯ ಪಾರ್ಕ್ ಹತ್ತಿರ ಬರುವ ವೇಳೆಗೆ ಸಂಪೂರ್ಣ ಬೆಳಗಾಗಿತ್ತು. ಅಷ್ಟೊತ್ತು ನಸುಕಿನ ಮಂಜುಗತ್ತಲಲ್ಲಿ ಅಡಗಿದ್ದ ಲೋಕವೆಲ್ಲವೂ ಬಯಲಿಗೆ ಬಂತು. ತಾನು ರಾತ್ರಿ ಕಂಡಿದ್ದ ಕನಸು ಈಗ ನನಸಾಗಿ ಕಣ್ಣೆದುರು ಬಂದಿದ್ದರೆ ಅದೆಷ್ಟು ಹಿತವಾಗ್ತಿತ್ತು. ಆ ಪ್ರಿಯಕಾರಿಣಿ ಕನಸಲ್ಲಿ ಏಕಾಏಕಿ ಸಿಕ್ಕಂತೆಯೇ ಈ ಬೆಳಗಿನಲ್ಲಿ ನನಸಾಗಿ ತನ್ನೆದುರು ಬಂದು ನಿಂತಿದ್ದರೆ? ಎಷ್ಟು ಚೆನ್ನಾಗಿತ್ತು, ಎಂದು ವೇಣುಗೋಪಾಲನ ಮೈರೋಮ ಕೊಂಚ ನಿಮಿರಿಬಿಟ್ಟಿತು. ಆಕಾಶದ ಕಡೆಯಿಂದ ಸಾಲುಸಾಲಾಗಿ ಬೆಳ್ಳಕ್ಕಿಗಳು ಕನಸಿನಂತೆ ಹಾರಿಹೋಗುತ್ತಿದ್ದವು. ಅವನು ನಡೆಯುತ್ತಿದ್ದ ಪಾರ್ಕ್‌ನ ದಾರಿಯಲ್ಲಿ ಒಂದೆರಡು ಹುಡುಗಿಯರು ಆಗಲೇ ಸ್ಕೈಪ್ಲಿಂಗ್ ಮಾಡುತ್ತಿದ್ದರು. ಆ ಹುಡುಗಿ ಪ್ರಿಯಕಾರಿಣಿ ಇರಬಹುದಾ ಅಂತ ವೇಣುಗೋಪಾಲ ಹುಂಬ ಧೈರ್ಯದಲ್ಲಿ ನೋಡಿದ. ಅಲ್ಲಲ್ಲ ಎಂದು ಸಪ್ಪಗಾಗಿ ಅಲ್ಲೇ ಮರವೊಂದರ ಬುಡದಲ್ಲಿ ಕೂತುಬಿಟ್ಟ. ಅವನ ಮೈಮನಸ್ಸೆಲ್ಲಾ ಪ್ರಿಯಕಾರಿಣಿ ಪ್ರಿಯಕಾರಿಣಿ ಅನ್ನುತ್ತಿತ್ತು. ಆ ಭಾವದಲ್ಲೇ ಅವನಿಗೆ ತನ್ನ ಸುತ್ತಲೂ ಜರುಗುತ್ತಿರುವ ಸಣ್ಣ ಪುಟ್ಟ ಚಟುವಟಿಕೆಗಳೆಲ್ಲವೂ ಚೆಂದವಾಗಿ ಕಾಣುತ್ತಿತ್ತು. ವೇಣುಗೋಪಾಲ ಕುಳಿತ ಜಾಗದಲ್ಲಿ ಆ ಬೆಳಗ್ಗಿನ ಎಳೆ ಬಿಸಿಲು ಹಗುರನೇ ಮೂಡುತ್ತಾ ಅಲ್ಲಿದ್ದ ಹುಲ್ಲಿನ ಮೇಲಿನ ಇಬ್ಬನಿಗಳನ್ನು ತೋಳೆಸಿದವು. ಬೆಳಗ್ಗಿನ ಹಿತವಾದ ಗಾಳಿಗೆ ಎಲ್ಲೋ ಅರಳಿದ್ದ ಹೂವಿನ ಘಮವೊಂದು ತೇಲಿಬಂದು ವೇಣುಗೋಪಾಲನನ್ನು ಮತ್ತೇರಿಸಿಬಿಟ್ಟಿತು. ಅದೇ ಗಾಳಿಗೆ ಅಲ್ಲಿದ್ದ ಚಾಕ್ಲೇಟ್ ಕಾಗದಗಳು, ಬಿಸ್ಕೆಟ್ ಕವರ್‌ಗಳು, ಮತ್ತೇನೇನೋ ಕಾಗದದ ಚೂರುಗಳು ಬೀಸಿ ಬಂದವು. ಇನ್ನೂ ಕೆಲವು ಗಾಳಿಪಟದಂತೆ ಎತ್ತಲೋ ಹಾರಿಹೋಯ್ತು.

ಹುಲ್ಲು, ಇಬ್ಬನಿಯನ್ನು ಸಹಜವಾಗಿ ನೋಡುವ ಹಾಗೆ ತನ್ನ ಕಾಲಿನತ್ತ ಬೀಸಿ ಬಿದ್ದಿದ್ದ ಕಾಗದದ ಚೂರೊಂದನ್ನು ನಿರುಕಿಸಿದಾಗ ವೇಣುಗೋಪಾಲ ಒಮ್ಮೆ ಹೌಹಾರಿಹೋದಂತಾದ. ಆ ಚೂರಾದ ಕಾಗದದಲ್ಲಿ ಒಂದೇ ಒಂದು ಸಾಲು ಮಾತ್ರ ಕಾಣಿಸಿತು ಅವನಿಗೆ. "ಯುವ ಸಂಗೀತ ಕಲಾವಿದೆ ಪ್ರಿಯಕಾರಿಣಿ ನಿಧನ" ಎಂದು ಸಣ್ಣಗೇ ಬರೆದ ನಿಧನ ಸುದ್ದಿಯ ಸಾಲು ನೋಡಿ ವೇಣುಗೋಪಾಲ ಕುಸಿದೇ ಹೋದ. ಒದ್ದೆ ಮುದ್ದೆ ಆಗಿದ್ದ ಆ



ಕಾಗದವನ್ನು ಸರಿಯಾಗಿ ಬಿಡಿಸಿ ನೋಡಿದ. ಬೆಳಗ್ಗಿನ ಇಬ್ಬನಿ ಬಿದ್ದು ಒದ್ದೆಯಾಗಿದ್ದ ಆ ಕಾಗದದ ಚೂರಿನಲ್ಲಿ ಮತ್ತೇನೂ ಕಾಣಿಸುವ ಹಾಗಿರಲಿಲ್ಲ. ಊರಿನ ಹೆಸರೂ ಕಾಣಲಿಲ್ಲ, ಸುದ್ದಿಯ ಕೆಳಗೆ ಹುಡುಗಿಯ ಕತ್ತಿನ ಅರ್ಧಭಾಗ ಮಾತ್ರ ಅಸ್ಪಷ್ಟವಾಗಿ ಕಾಣಿಸಿಯೂ ಕಾಣಿಸದ ತರ ಇತ್ತು. ಇನ್ನುಳಿದ ಭಾಗಚೂರಾಗಿ ಹೋಗಿತ್ತು. ಅದನ್ನು ನೋಡುತ್ತಲೇ ವೇಣುಗೋಪಾಲನ ಕೈಗಳು ಗಡಗಡ ಕಂಪಿಸುತ್ತಿದ್ದವು. "ಪ್ರಿಯಕಾರಿಣಿ ಪ್ರಿಯಕಾರಿಣಿ" ಎಂದು ಒಳಗೊಳಗೇ ಚೀತ್ಕರಿಸಿದ. ಇದ್ಯಾವ ಪ್ರಿಯಕಾರಿಣಿ? ಇಲ್ಲ ಇಲ್ಲ ಇರಲಿಲ್ಲ. ಅವಳಲ್ಲ, ಇದು ಬೇರ್ಯಾರೋ ಪ್ರಿಯಕಾರಿಣಿ ಇರ್ಬೇಕು ಎಂದು ಮನಸ್ಸು ಅಸ್ಪಷ್ಟವಾಗಿ ತೊದಲುತ್ತಿದ್ದರೂ, ಅವಳೇ ಇರಬಹುದಾ? ಪ್ರಿಯಕಾರಿಣಿ ಸಂಗೀತ ಹಾಡುತ್ತಿದ್ದಳಾ? ಎಂದು ಮತ್ತೆ ಪ್ರಶ್ನೆ ಹುಟ್ಟಿತು. ಕಾಲೇಜು ದಿನಗಳನ್ನು ನೆನಪಿಗೆ ತಂದುಕೊಂಡ. ಕಾಲೇಜ್ ಡೇ ಸಂಭ್ರಮದಲ್ಲಿ ಅವಳ್ಯಾವುದೋ ಹಾಡು ಹಾಡಿದ್ದಳು. ಕಾಲೇಜಿನ ಸಾಹಿತ್ಯ ಸಂಘದ ಕಾರ್ಯಕ್ರಮದಲ್ಲಿ ಪ್ರಾರ್ಥನೆ ಹಾಡುತ್ತಿದ್ದವಳು ಪ್ರಿಯಕಾರಿಣಿಯೇ ಅಲ್ವಾ? ಅಂತ ಜಿಗ್ಗನೇ ನೆನಪಾಯ್ತು.

ಆದರೆ ಅವಳು ಕಲಾವಿದೆಯಾಗಿದ್ದು ಯಾವಾಗ? ಬಹುಶಃ ಕಾಲೇಜು ದಿನಗಳು ಮುಗಿದ ಬಳಿಕವೇನಾದರೂ ಸಂಗೀತ ಅಭ್ಯಾಸದಲ್ಲಿ ಗಾಢವಾಗಿ ತೊಡಗಿಸಿಕೊಂಡು ಸಾಧನೆ ಮಾಡಿದಳಾ? ಅಂತೆಲ್ಲಾ ಯೋಚಿಸಿದ ವೇಣುಗೋಪಾಲ. ಮತ್ತೊಮ್ಮೆ, ಆದರೂ ಈ ಪ್ರಿಯಕಾರಿಣಿ ಬೇರ್ಯಾರೋ ಇರಬಹುದು, ಒಂದೇ ಹೆಸರಿನವರು ರಾಶಿ ರಾಶಿ ಜನರಿರ್ತಾರೆ ಲೋಕದಲ್ಲಿ? ಅಂತ ಸಮಾಧಾನ ಪಟ್ಟನಾದರೂ ಅವನ ಮನಸ್ಸು ಏನೊಂದೂ ನಿರ್ಧರಿಸಲಾಗದೇ ಅಸ್ವಸ್ಥವಾಯಿತು. ತಾನು ದಿನ ಪತ್ರಿಕೆ ಓದುವುದನ್ನು ರೂಢಿಯಾಗಿರಿಸಿಕೊಂಡಿದ್ದರೆ ಈ ಸುದ್ದಿ ಯಾವತ್ತೋ ಸಿಕ್ಕುತ್ತಿತ್ತು ಎಂದು ಒಳಗೊಳಗೇ ಪೇಚಾಡಿದ. ತುಂಬಾ ಹೊತ್ತು ಅಲ್ಲೇ ಮೌನವಾಗಿ ಕುಳಿತ ವೇಣುಗೋಪಾಲನಿಗೆ ಕನಸಲ್ಲಿ ಬಂದ ಪ್ರಿಯಕಾರಿಣಿ, ವಾಸ್ತವದಲ್ಲಿ ಜೀವಂತವಾಗಿಲ್ಲವಾ? ಎನ್ನುವ ಪ್ರಶ್ನೆ ಭಯಾನಕವಾಗಿ ಕಾಣಿಸಿತು. ತಾನು ಕಂಡ ಕನಸು ಮತ್ತು ಈಗ ಕಂಡ ಪತ್ರಿಕೆಯ ಅಸ್ಪಷ್ಟ ಸುದ್ದಿಯೂ ಒಂದುಗೂಡಿ ಯಾವುದೋ ಒಂದು ವಿಚಿತ್ರ ದ್ವಂದ್ವದಲ್ಲಿ, ತೊಳಲಾಡಿದ.

ಹಾಗೆ ಕುಳಿತ ಪುಣ್ಯಾತ್ಮನಿಗೆ ಒಂದೇ ಸಮನೆ ಜೋರು ಮಳೆ ಶುರುವಾಗಿ ಚಂಡಿಯಾದಾಗಲೇ ಎಚ್ಚರಾಗಿದ್ದು. ವಾಚು ನೋಡಿದರೆ ಸಮಯ ಏಳೂವರೆ ಕಳೆದಿತ್ತು. ಮನೆಯ ಬಾಗಿಲಿಗೆ ಬೀಗ ಹಾಕಿ ಬಂದಿದ್ದೇನೆ, ಗಂಗೋತ್ರಿ ಎದ್ದಾಗಿರುತ್ತದೆ ಎಂದು ಗಾಬರಿಗೊಂಡು ಮನೆ ಕಡೆ ನಡೆದ. ಕದ ತೆರೆದ ಸದ್ದಾಗುತ್ತಲೇ ಗಂಗೋತ್ರಿ ಬಳಿ ಬಂದು, ಎಲ್ಲಿಗೆ ಹೋಗಿದ್ರಿ ಹೇಳ್ದೇ ಕೇಳ್ದೇ? ಎಂದು ಪ್ರಶ್ನೆ ಮಾಡುತ್ತ ಉತ್ತರಕ್ಕಾಗಿ ಕಾಯದೇ ಕಿಟಕಿ ಪಕ್ಕದ ಮೇಜಿನತ್ತ ನಡೆದು, 'ಅಲ್ಲ ಮಾರಾರ್ರೆ, ನೀವು ಇಷ್ಟೊಂದೊಳ್ಳೆ ಚಿತ್ರ ಬಿಡಿಸ್ತೀರಿ ಅಂತ ನಂಗೆ ಗೊತ್ತಿರ್ಲೇ ಇಲ್ಲ, ಭಾರೀ ಚಂದ ಉಂಟು, ಯಾವಾಗ ಬಿಡಿಸಿದ್ರಿ ಇದನ್ನೆಲ್ಲಾ?' ಎಂದು ಸೌಮ್ಯವಾಗಿ ನಕ್ಕಳು. ನಂಗೂ ಚಿತ್ರ ಬಿಡಿಸೋದು ಅಂದ್ರೆ ತುಂಬಾ ಇಷ್ಟ, ಆದ್ರೆ ಅಭ್ಯಾಸವೇ ತಪ್ಪಿ ಹೋಗಿದೆ. ನೀವು ಬಿಡಿಸಿದ್ದು ನೋಡಿ ನಂಗೂ ಬಿಡಿಸುವ ಆಸೆಯಾಗಿದೆ ಎಂದು ನಕ್ಕಳು. ಮುಂಜಾನೆ ಕೂತು ಬಿಡಿಸಿದ್ದ ಕನಸಿನ ಚಿತ್ರದ ನೆನಪಾಗಿ ಆ ಚಿತ್ರವನ್ನೇ ಮತ್ತೊಮ್ಮೆ ನೋಡುತ್ತ ನಿಂತು ಬಿಟ್ಟ ವೇಣುಗೋಪಾಲ. ಬದುಕೇ ಒಂದು ಅಸ್ಪಷ್ಟ ಕನಸಿನಂತೆ. ನಾವು ಕಾಣದ್ದನ್ನು ಹಿಡಿಯಲು ಹಾತೊರೆಯುತ್ತೇವೆ. ಕಣ್ಣೆದುರೇ ಕಾಣಿಸಿದ್ದನ್ನು ನಾವ್ಯಾಕೆ ಅಪ್ಪಿಕೊಳ್ಳುವುದಿಲ್ಲ? ಎಂದು ಒಂದು ಕ್ಷಣ ತನ್ನಷ್ಟಕ್ಕೆ ಜಿಜ್ಞಾಸೆ ಮಾಡಿದ. ಅವನೆದುರು ಅಚ್ಚ ಬಿಳಿ ಮಲ್ಲಿಗೆಯಂತೆ ನಗುತ್ತಾ ನಿಂತಿದ್ದ ಗಂಗೋತ್ರಿಯ ಮುಗ್ಧ ಕಂಗಳ ಹೊಳಪನ್ನು ನೋಡಿದ್ದೇ ಅವನ ತೊಳಲಾಟಗಳು, ಅಸ್ಪಷ್ಟತೆಗಳು, ರಾತ್ರಿ ಕಂಡ ಕನಸುಗಳು ಒಮ್ಮೆ ನೀರಾಗಿ ಹೋದವು. ಗಂಗೋತ್ರಿಯನ್ನು ತನ್ನೊಳಗೆ ಧುತ್ತೆಂದು ಮೂಡಿದ ಅಗೋಚರ ಪ್ರೀತಿಯ ಸ್ಪರ್ಶದಲ್ಲಿ ಗಟ್ಟಿಯಾಗಿ ತಬ್ಬಿಡಿದ. ಅವನನ್ನೂ ಅವಳು ಯಾವತ್ತಿಗಿಂತಲೂ ಗಾಢವಾಗಿ ಅಪ್ಪಿಡಿದಳು.

ಹೊರಗೆ ಮಳೆ ಇನ್ನೂ ಧೋ ಧೋ ಎಂದು ಸುರಿಯುತ್ತಲೇ ಇತ್ತು. ತಲೆ ಸ್ನಾನ ಮಾಡಿಕೊಂಡು ಬಂದಿದ್ದ ಗಂಗೋತ್ರಿಯ ಹೆರಳ ಹನಿಗಳು ಅಲ್ಲಿದ್ದ ವೇಣುಗೋಪಾಲ ಬಿಡಿಸಿದ ಕನಸಿನ ಚಿತ್ರದ ಮೇಲೆ ಬಿದ್ದು ಅಲ್ಲಿನ ಬಣ್ಣಗಳ ಜೊತೆ ಒಂದಾದವು.

ಪ್ರತಿಕ್ರಿಯಿಸಿ: **feedback@sudha.co.in**